ಕಥೆ

# ನೋಟಿಫಿಕೇಶನ್



ಸುವರ್ಣ ಚೆಳ್ಳೂರು

ಕಲೆ: ಸಂತೋಷ್ ಸಸಿಹಿತ್ಲು

ಮುಚ್ಚಿದ ಕಣ್ಣು ಹಾಗೆ ಮುಚ್ಚಿತ್ತು, ಆದರೆ ರಾಯಣ್ಣ ಎಚ್ಚರವಾಗಿದ್ದ. ಎದ್ದೇಳಬೇಕೋ ಬೇಡ್ವೊ ಅನ್ನೊ ಗೊಂದಲದಲ್ಲೇ ಇದ್ದ. ಅಷ್ಟರಲ್ಲಿ ಹೊರಗಡೆ ಬಿಟ್ಟು ಬಿಡದೆ ಸುರಿಯುತ್ತಿದ್ದ ಮಳೆ, ಮತ್ತಷ್ಟು ಹೊತ್ತು ಹಾಸಿಗೆಯಲ್ಲೆ ಇರಲು ಪ್ರೇರೇಪಿಸಿದಂತಿತ್ತು. ಆದರೆ ಕಾಲಿನ ಕೀಲುಗಳೆಲ್ಲ ಯಾರೋ ಹಿಡಿದು ಎಳೆದಂತಾಗಿ, ಅದರ ನೋವಿನಿಂದ ಹೊರಬರಲು ಕಾಲುಗಳನ್ನ ಅಲ್ಲಾಡಿಸುತ್ತಾ ಮಲಗಿದ. ಆದರೂ ಕಾಲಿನ ಮೀನಖಂಡ ತುಂಬಾ ನೋವಾಗಿ ಎದ್ದು ಕುಂತ. ರೂಮಿನ ತುಂಬಾ ಕತ್ತಲು ಆವರಿಸಿತ್ತು, ಆದರೆ ರೂಮಿನ ಬಾಗಿಲ ಕೆಳಗೆ ಸ್ವಲ್ಪ ಜಾಗ ಇದ್ದಿದ್ದರಿಂದ ಅದರ ಮೂಲಕ ಬೆಳಕು ರೂಮಿಗೆ ಸುಳಿಯುತ್ತಿತ್ತು. ಬಾಗಿಲ ಕಡೆಗೆ ಕಣ್ಣು ಹಾಯಿಸಿದಾಗ, ಇನ್ನೂ ಬೆಳಗಾಗಿಲ್ಲ ಅನ್ನೊದು ರಾಯಣ್ಣನಿಗೆ ಖಾತ್ರಿ ಆಯ್ತು. ತನ್ನ ಕಾಲುಗಳನ್ನ ನಿಧಾನವಾಗಿ ತಾನೇ ಒತ್ತಿಕೊಳ್ಳುತ್ತಾ ಅದಕ್ಕೊಂದಿಷ್ಟು ಜಂಡುಬಾಮ್ ಹಚ್ಚಿ ತಿಕ್ಕಿದ.

'ಮನ್ಯಾಗಿದ್ದಿದ್ರ ಇಷ್ಟೊತ್ತಿಗೆ ಅವ್ವ ಕೈಯಾಡಿಸಿ ತಲಿ ಸವರಿ, ಕಾಲು ಒತ್ತಿ ಮಲಗಸ್ತಿದ್ಲು' ಅಂದುಕೊಳ್ತಾ, ಮಂಚದಿಂದ ಕೆಳಗಿಳಿದು ಹತ್ತಿರದಲ್ಲೇ ಇದ್ದ ಕೊಡದಿಂದ ನೀರು ಬಗ್ಗಿಸಿ ಗಟಗಟ ಕುಡಿದು ಹಾಸಿಗೆಯಲ್ಲಿ ಮಲಗಲು ಮನಸ್ಸಾಗದೆ ರೂಮಿನ ಬಾಗಿಲು ತೆಗೆದು ಹೊರಗೆ ಬಂದು, ನಿಧಾನವಾಗಿ ಯಾವುದೊ ರಾಗಕ್ಕೆ ತಾಳವೆನ್ನುವಂತೆ ಲಯಬದ್ದವಾಗಿ ಸುರಿಯುತ್ತಿದ್ದ ಮಳೆಯನ್ನ ದಿಟ್ಟಿಸುತ್ತಾ, ಟೇರೆಸ್‌ಗೆ ಬಂದು ಸುತ್ತಲೂ ಕಣ್ಣು ಹಾಯಿಸುತ್ತಾ ನಿಂತ.

ಟೆರೆಸ್‌ನ ತುದಿಗೆ ಬಂದು ನಿಂತಾಗ ಬದುಕಿನ ಯಾವುದೋ ತುತ್ತತುದಿಗೆ ಬಂದು ತಲುಪಿ, ಹಿಂದಿನಿಂದ ಬಂದು ನೂಕುವವರಿಲ್ಲದೆ, ತಾನೇ ಸ್ವತಃ ಬೀಳಲೂ ಆಗದೆ ಮಧ್ಯದಲ್ಲಿಯೇ ಇರುವೆನೆನೋ ಎಂಬ ಗೊಂದಲದಲ್ಲಿರುತ್ತಿದ್ದ. ಹೀಗೆ ಗೊಂದಲದಲ್ಲಿರುವಾಗೆಲ್ಲ, ವಾರದ ಹಿಂದೆಯಷ್ಟೆ ಫಸ್ಟ್ ಡಿವಿಸನ್ ಕ್ಲರ್ಕ್ ನೌಕರಿಗೆ ಸೇರಿ ರೂಮ್ ಬಿಟ್ಟು ಹೋಗಿದ್ದ ಗೆಳೆಯ ಆದರ್ಶ ಆಗಾಗ ಹೀಗೆ ನಿಂತಾಗ, ಹಿಂದಿನಿಂದ ನಿಧಾನವಾಗಿ ಬಂದು ಎರಡೂ ಭುಜಗಳನ್ನ ಕೈಗಳಿಂದ ಹಿಡಿದು ಟೇರೆಸ್‌ನ ತುದಿಯಿಂದ ನೂಕಿದಂತೆ ಮಾಡಿ 'ಅಲಲೇ ರಾಯಾ.. ನಿನ್ ನೀ ಎನ್ ಟೈಟಾನಿಕ್ ಹೀರೊ ಜಾಕ್ ಅಂತ ಅನ್ಕೊಂಡಿ? ಬಿದ್ರ ಮಣಕಾಲ್ ಚಿಪ್ಪು ಚಿಪ್ಸ್ ಆಕ್ಕೃತಿ ಮಗನಾ, ಆಮೇಲೆ ಯಾವ್ ರೋಸ್ ನಿನ್ ಹಂತ್ಯಾಕ ಬರಂಗಿಲ್ಲ ನೋಡಪಾ' ಅಂತ ಛೇಡಿಸುತ್ತಿದ್ದುದ್ದು ನೆನಪಾಗಿ ರಾಯಣ್ಣ ತುಸು ನಕ್ಕ. ಟೇರೆಸ್‌ನ ತುದಿಯಲ್ಲೇ ನಿಂತು ಮತ್ತೆ ಕಣ್ಣರಳಿಸಿದ.

ಮಧ್ಯರಾತ್ರಿ ಮಳೆಹನಿಯ ಲಯಸೇರಿದ ಸದ್ದು, ರೋಡ್ ಮೇಲಿನ ಲೈಟ್ ಕಂಬಗಳ ಬೆಳಕು, ದೂರದಲ್ಲೆಲ್ಲೊ ಕೆಂಪು ಬೆಳಕು ಹೊತ್ತು ಕೂತಿರುವ ಫ್ಯಾಕ್ಟರಿ, ಮನೆ ಮುಂದೆ ಇದ್ದ ಗೀತಾ